ಇಂದು ದಿಃ**28-06-2025** ರಂದು ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ ಎ.ವಿ.ಎಂ ವಕೀಲರಿಂದ 4 ಮತ್ತು 5 ನೇ ಪ್ರತಿವಾದಿಗಳ ಪರಃ**

ನಾನು 10 ನೇ ತರಗತಿಯವರೆಗೆ ಶಾಲೆ ಕಲಿತ್ತಿದ್ದೇನೆ. 1 ನೇ ಪ್ರತಿವಾದಿ ನನ್ನ ತಾಯಿ. 2 ನೇ ಪ್ರತಿವಾದಿ ನನ್ನ ತಂಗಿ. ಪ್ರತಿವಾದಿ 3 ಮತ್ತು 6 ನನ್ನ ತಮ್ಮಂದಿರು. 4 ನೇ ಪ್ರತಿವಾದಿ ನನ್ನ ತಮ್ಮ ರಾಜಶೇಖರ ಈತನ ಹೆಂಡತಿ. 5 ನೇ ಪ್ರತಿವಾದಿ ನನ್ನ ತಮ್ಮನ ಮಗ. ಪ್ರತಿವಾದಿ 1 ರಿಂದ 3 ಮತ್ತು 6 ಬನ್ನಿಕೋಡು ಗ್ರಾಮದಲ್ಲಿ ವಾಸ ಇದ್ದಾರೆ ಎಂದರೆ ಸರಿ. ಅವರು ಆರೋಗ್ಯವಾಗಿದ್ದಾರೆ ಎಂದರೆ ಸರಿ. 4 ಮತ್ತು 5 ನೇ ಪ್ರತಿವಾದಿಯರು ಈ ದಾವೆಯಲ್ಲಿ ಏನು ತಕರಾರು ಸಲ್ಲಿಸಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ನನ್ನ ತಂದೆಯ ಹೆಸರು ಬಿ.ಹೆಚ್ ಗಿರಿಗೌಡ. ನನ್ನ ತಂದೆಯ ಹೆಸರನ್ನು 5 ನೇ ಪ್ರತಿವಾದಿಗೆ ಇಟ್ಟಿದ್ದಾರೆ ಎಂದರೆ ಸರಿ. ನನ್ನ ತಂದೆ 2013 ರಲ್ಲಿ ತೀರಿಕೊಂಡರು. ನನಗೆ ತಿಂಗಳು ಮತ್ತು ದಿನಾಂಕ ನೆನಪಿಲ್ಲ. ದಾವಾ ಶೆಡ್ಯೂಲ್ ಎ ಜಮೀನುಗಳು ಮತ್ತು ದಾವಾ ಬಿ ಶೆಡ್ಯೂಲ್ ನ ಐಟಂ ನಂಬರ್ 1 ರಿಂದ 3 ಮನೆ ಮತ್ತು ಕಣಗಳು ಮಾತ್ರ ನನ್ನ ತಂದೆಗೆ ಅವರ ಸಹೋದರರ ನಡುವೆ ಆದ ಪಾಲುವಿಭಾಗದಲ್ಲಿ ಬಂದಿದೆ ಎಂದರೆ ಸರಿ. ನನ್ನ ತಂದೆ ಮತ್ತು ಆತನ ಸಹೋದರರ ನಡುವೆ ಪಾಲುವಿಭಾಗ ಆದ ದಿನಾಂಕ ಗೊತ್ತಿಲ್ಲ, ಆದರೆ ಸುಮಾರು 13 ವರ್ಷಗಳ ಹಿಂದೆ ಆಗಿರುತ್ತದೆ.

ನನ್ನ ತಂದೆ ತೀರಿಕೊಂಡ ನಂತರ, ಶೆಡ್ಯೂಲ್ ಎ ಹೊಲಗಳು ನನ್ನ ತಾಯಿ, ನನ್ನ ಸಹೋದರಿ ಮತ್ತು ಸಹೋದರರು ಹಾಗೂ ನನ್ನ ಹೆಸರಿಗೆ ಜಂಟಿಯಾಗಿ ಖಾತೆ ಆದವು. ಶೆಡ್ಯೂಲ್ ಬಿ ಐಟಂ ನಂಬರ್ 1 ರಿಂದ 3 ಆಸ್ತಿಗಳು ಈಗಲೂ ನನ್ನ ತಂದೆಯ ಹೆಸರಿನಲ್ಲಿ ಇವೆ. ಶೆಡ್ಯೂಲ್ ಬಿ ಯ ಐಟಂ ನಂಬರ್ 4 ರಿಂದ 6

ಆಸ್ತಿಗಳು 4 ನೇ ಪ್ರತಿವಾದಿಯ ಹೆಸರಿನಲ್ಲಿ ಇವೆ. ಐಟಂ ನಂಬರ್ 7 ಶೆಡ್ಯೂಲ್ ಬಿ ಖಾಲಿ ಜಾಗ ಇದು ನನ್ನ ತಂದೆಯ ಹೆಸರಿನಲ್ಲಿ ಇದೆ. ನನ್ನ ತಮ್ಮ ರಾಜಶೇಖರ ಕೋವಿಡ್ ಆಗಿ ತೀರಿಕೊಂಡರು. ರಾಜಶೇಖರ ಈತನಿಗೆ ಪ್ರತಿವಾದಿ 4 ಮತ್ತು 5 ಮಾತ್ರ ವಾರಸುದಾರರು ಎಂದರೆ ಸರಿ. 5 ನೇ ಪ್ರತಿವಾದಿಗೆ ಈಗ ಸುಮಾರು 6 ವರ್ಷ ವಯಸ್ಸು ಇರಬಹುದು. 4 ಮತ್ತು 5 ನೇ ಪ್ರತಿವಾದಿ ಶೆಡ್ಯೂಲ್ ಬಿ ಯ ಐಟಂ ನಂಬರ್ 2 ಆಸ್ತಿಯಲ್ಲಿ ವಾಸ ಇದ್ದಾರೆ ಎಂದರೆ ಸರಿ. ನನ್ನ ತಾಯಿ, 3 ನೇ ಪ್ರತಿವಾದಿ ಮತ್ತು 6 ನೇ ಪ್ರತಿವಾದಿ ಬಿ ಶೆಡ್ಯೂಲ್ ನ ಐಟಂ ನಂಬರ್ 3 ಮನೆಯಲ್ಲಿ ವಾಸ ಇದ್ದಾರೆ, ನಾನು ಬೇರೆ ಕಡೆ ವಾಸ ಇದ್ದೇನೆ. ನಾನು ಮತ್ತು ನನ್ನ ಕುಟುಂಬ ಬನ್ನಿಕೋಡು ಗ್ರಾಮದಲ್ಲಿ ಬೇರೆ ಮನೆಯಲ್ಲಿ ವಾಸ ಇದ್ದೇವೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ. ಸಾಕ್ಷಿ ನನ್ನ ತಂದೆಯ ಸ್ವತ್ತಿನಲ್ಲಿ ವಾಸ ಇದ್ದೇವೆ ಎಂದು ಹೇಳುತ್ತಾರೆ. ನಾನು ನನ್ನ ವಾದಪತ್ರದಲ್ಲಿ ಬೇರೆ ಮನೆಯಲ್ಲಿ ವಾಸ ಇದ್ದ ಬಗ್ಗೆ ತಿಳಿಸಿಲ್ಲ. ಈ ವಿಷಯ ತಿಳಿಸಲು ತೊಂದರೆ ಇರಲಿಲ್ಲ. ಸಾಕ್ಷಿಗೆ ಅವರ ವಾದಪತ್ರ ತೋರಿಸಿ, ಅದರಲ್ಲಿ ನಾನು ಬಾಡಿಗೆ ಮನೆಯಲ್ಲಿ ವಾಸ ಇದ್ದೇನೆ ಮತ್ತು ಕೂಲಿ ಮಾಡಿ ಜೀವನ ಮಾಡುತ್ತಿದ್ದೇನೆ ಎಂದು ತಿಳಿಸಿದ್ದೇನೆ ಎಂದರೆ ಸರಿ. ಶಂಕರಪ್ಪ ಎನ್ನುವವರ ಮನೆಯಲ್ಲಿ ವಾಸ ಇದ್ದೇನು. ಬಾಡಿಗೆ ಮನೆಯ ಫೋಟೋ ಹಾಕಲು ತೊಂದರೆ ಇಲ್ಲ ಎಂದರೆ ಸಾಕ್ಷಿ ಅದನ್ನು ಬಿಟ್ಟಿದ್ದೇನೆ ಎಂದು ಹೇಳುತ್ತಾರೆ. ಈಗಲೂ ನಾವು ಶೆಡ್ಯೂಲ್ ಬಿ ಯ ಐಟಂ ನಂಬರ್ 3 ಮನೆಯಲ್ಲಿ ವಾಸ ಇದ್ದೇವೆ ಎಂದರೆ ಸರಿ.

ನನ್ನ ತಂದೆ ತೀರಿಕೊಂಡ ನಂತರ ಮನೆಯ ಎಲ್ಲಾ ವ್ಯವಹಾರವನ್ನು ನಾನೇ ನೋಡಿಕೊಳ್ಳುತ್ತಿದ್ದೆನು ಎಂದರೆ ಸರಿಯಲ್ಲ. ಸಾಕ್ಷಿ ನನ್ನ ತಮ್ಮಂದಿರು ಸಹ ನೋಡಿಕೊಳ್ಳುತ್ತಿದ್ದರು ಎಂದು ಹೇಳುತ್ತಾರೆ. 6 ನೇ ಪ್ರತಿವಾದಿ

ರಾಣೇಬೆನ್ನೂರಿನಲ್ಲಿ ಇಂಜನಿಯರಿಂಗ್ ಕಾಲೇಜ್ ನಲ್ಲಿ ಉಪನ್ಯಾಸಕ ಎಂದು ಇದ್ದಾರೆ. ನಾನು ಮತ್ತು 3 ನೇ ಪ್ರತಿವಾದಿ ಬನ್ನಿಕೋಡು ಗ್ರಾಮದಲ್ಲಿ ವಾಸ ಇದ್ದೇವೆ. ನಾನು, ನನ್ನ ತಾಯಿ ಮತ್ತು 3 ನೇ ಪ್ರತಿವಾದಿ ನನ್ನ ತಂದೆಯ ಜಮೀನಿನಿಂದ ಬರುವ ಆದಾಯದಿಂದ ಜೀವನ ಮಾಡುತ್ತೇವೆ ಎಂದರೆ ಸರಿ. ಸಾಕ್ಷಿ ಪುನಃ ಆದಾಯವನ್ನು ಅವರು ತೆಗೆದುಕೊಂಡಿದ್ದಾರೆ ಎಂದು ಹೇಳುತ್ತಾರೆ. ನಾನು ಪ್ರತಿವಾದಿ ನಂ. 1 ರಿಂದ 3 ಮತ್ತು 6 ಇವರಿಗೆ ಈ ದಾವಾ ಜಮೀನುಗಳಿಂದ ಬರುವ ಆದಾಯದ ಬಗ್ಗೆ ಲೆಕ್ಕ ಕೊಡಿ ಎಂದು ವಕೀಲರ ಮುಖಾಂತರ ನೋಟೀಸ್ ಕೊಟ್ಟಿದ್ದೆನು. ಈ ದಾವೆ ಸಲ್ಲಿಸುವ ಪೂರ್ವದಲ್ಲಿ ಕೊಟ್ಟಿದ್ದೆನು. ಸದರಿ ನೋಟೀಸ್ ನ ನಕಲನ್ನು ಈ ದಾವೆಯಲ್ಲಿ ಸಲ್ಲಿಸಿಲ್ಲ. ನೋಟೀಸ್ ಕೊಟ್ಟ ವಿಷಯವನ್ನು ವಾದಪತ್ರದಲ್ಲಿ ತಿಳಿಸಿದ್ದೇನೆ. ನಾನು ನೋಟೀಸ್ ಕೊಟ್ಟಿರುತ್ತೇನೆ ಎಂದು ವಾದಪತ್ರದಲ್ಲಿ ತಿಳಿಸದೇ ಇದ್ದರೂ, ತಿಳಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಶೆಡ್ಯೂಲ್ ಬಿ ಯ ಐಟಂ ನಂಬರ್ 7 ಆಸ್ತಿ ಇದು ನನ್ನ ತಂದೆ ತೀರಿಕೊಂಡ ನಂತರ, ನಮೆಲ್ಲರ ಹೆಸರಿಗೆ ಖಾತೆ ಬದಲಾವಣೆ ಆಗಿದೆ ಎಂದರೆ ಸರಿಯಲ್ಲ. ಸಾಕ್ಷಿ ನನ್ನ ತಂದೆಯ ಹೆಸರಿಗೆ ಇದೆ ಎಂದು ಹೇಳುತ್ತಾರೆ. ಒಟ್ಟು ಕುಟುಂಬದ ಆಸ್ತಿ ಇರುತ್ತದೆ.

4 ನೇ ಪ್ರತಿವಾದಿಯ ಗಂಡ ರಾಜಶೇಖರ ನಮ್ಮೂರಿನಲ್ಲಿ ಜೈಕಿಸಾನ್ ಎಂಬ ಕಿರಾಣಿ ಅಂಗಡಿ ನಡೆಸುತ್ತಿದ್ದರು ಎಂದರೆ ಸರಿ. ನಂತರ ರಾಜಶೇಖರ ಜೈಕಿಸಾನ್ ಎಂಬ ಗೊಬ್ಬರದ ಅಂಗಡಿ ಶುರುಮಾಡಿದನು ಎಂದರೆ ಸರಿ. 2010 ರಲ್ಲಿ ಆತ ಲೈಸೆನ್ಸ್ ಪಡೆದು ನಡೆಸಲು ಶುರುಮಾಡಿದನು ಎಂದರೆ ಸರಿ. ನಂತರ ಜೈಕಿಸಾನ್ ಕೃಷಿ ಕೇಂದ್ರ ಎಂಬ ಅಂಗಡಿಯನ್ನು ಆತ ಶುರುಮಾಡಿ, ಗೊಬ್ಬರದ ಜೊತೆಗೆ

ಕೀಟನಾಶಕವನ್ನು ಸಹ ಮಾರಾಟ ಮಾಡಲು ಶುರುಮಾಡಿದನು ಎಂದರೆ ಸರಿ. ಅಕ್ಕ ಪಕ್ಕದ ಹಳ್ಳಿಗಳಲ್ಲಿಯೂ ಸಹ ಆತ ಈ ಗೊಬ್ಬರ ಮತ್ತು ಕೀಟನಾಶಕ ಮಾರಾಟ ಮಾಡುತ್ತಿದ್ದನು ಎಂದರೆ ಸರಿ. ಆತ ಈ ವ್ಯವಹಾರಕ್ಕೆ ಜಿ.ಎಸ್.ಟಿ ನಂಬರ್ ಸಹ ತೆಗೆದುಕೊಂಡಿದ್ದನು ಎಂದರೆ ಸರಿ. ರಾಜಶೇಖರ ಈತನಿಗೆ ಈ ಕಿರಾಣಿ ಅಂಗಡ ಮತ್ತು ಗೊಬ್ಬರ ಮತ್ತು ಕೀಟನಾಶಕ ಅಂಗಡಿಗಳಿಂದ ಸಾಕಷ್ಟು ಆದಾಯ ಇತ್ತು ಎಂದರೆ ಸರಿ. ಸಾಕ್ಷಿ ನಾನು ಆತನಿಗೆ ಎಷ್ಟು ಆದಾಯ ಇತ್ತು ಎಂದು ಕೇಳಿಲ್ಲ ಎಂದು ಹೇಳುತ್ತಾರೆ. ರಾಜಶೇಖರ ತಾನು ಸಾಲ ಮಾಡಿ ಈ ವ್ಯವಹಾರ ಶುರುಮಾಡಿದ್ದನು ಎಂದರೆ ಸರಿ. ಸಾಕ್ಷಿ ಒಟ್ಟು ಕುಟುಂಬದಲ್ಲಿ ಇದ್ದಾಗ ಮಾಡಿದ್ದು ಎಂದು ಹೇಳುತ್ತಾರೆ. ನಾನು ರಾಜಶೇಖರ ಈತನಿಗೆ ಲೆಕ್ಕ ಕೇಳಿಲ್ಲ ಎಂದರೆ ಸರಿ. ಸಾಕ್ಷಿ ಆದರೆ ಒಟ್ಟು ಕುಟುಂಬದಲ್ಲಿ ವ್ಯವಹಾರ ಮಾಡುತ್ತಿದ್ದೆವು ಎಂದು ಹೇಳುತ್ತಾರೆ. ರಾಜಶೇಖರ ಈ ಅಂಗಡಿಗಳ ಕುರಿತು ತಾನು ಸರಕು ಖರೀದಿಸಿದ ಬಗ್ಗೆ ಮತ್ತು ಮಾರಾಟ ಮಾಡಿದ ಬಗ್ಗೆ ಲೆಕ್ಕ ಪತ್ರ ಬರೆಯುತ್ತಿದ್ದನು. ನನ್ನ ತಮ್ಮನಿಗೆ ಎಷ್ಟು ಆದಾಯ ಈ ವ್ಯವಹಾರಗಳಿಂದ ಬರುತ್ತದೆ ಎಂದು ಲೆಕ್ಕ ಕೇಳಿಲ್ಲ. ಸಾಕ್ಷಿ ಆತ ವ್ಯವಹಾರ ನಡೆಸಿಕೊಂಡು ಹೋಗುತ್ತಿದ್ದನು, ಹಣ ಕೊಡುತ್ತಿದ್ದೇವು ಎಂದು ಹೇಳುತ್ತಾರೆ. ರಾಜಶೇಖರ ಜೀವಂತ ಇದ್ದಾಗ ನಾನಾಗಲೀ, ನನ್ನ ತಾಯಿ, ನನ್ನ ಸಹೋದರರಾಗಲೀ ರಾಜಶೇಖರ ಈತನಿಗೆ ಈ ವ್ಯವಹಾರದಲ್ಲಿ ಏನೇನು ಲಾಭ ನಷ್ಟ ಆಗಿದೆ ಎಂದು ಲೆಕ್ಕ ಕೊಡು ಎಂದು ಕೇಳುತ್ತಿರಲಿಲ್ಲ. ರಾಜಶೇಖರ ಈ ವ್ಯವಹಾರದಿಂದ ಬಂದ ಹಣದಲ್ಲಿ ಮನೆತನಕ್ಕೆ ಸಹಾಯ ಮಾಡುತ್ತಿದ್ದನು ಎಂದರೆ ಸರಿ. ಈ ವ್ಯವಹಾರದಿಂದ ಆತನಿಗೆ ಸಾಕಷ್ಟು ಆದಾಯ ಇತ್ತು ಎಂದರೆ ಸಾಕ್ಷಿ ಜೀವನ ನಡೆಯುತ್ತಿತ್ತು ಎಂದು ಹೇಳುತ್ತಾರೆ. ಈ ವ್ಯವಹಾರದಿಂದ ರಾಜಶೇಖರ ಇವನಿಗೆ ಆದಾಯ ಸಾಕಷ್ಟು ಇತ್ತು ಎಂದರೆ ಸಾಕ್ಷಿ ಸಹಜವಾಗಿ ಆದಾಯ ಇತ್ತು, ಆದರೆ ಒಟ್ಟು

ಕುಟುಂಬಕ್ಕೆ ಕೊಡುತ್ತಿದ್ದನು ಎಂದು ಹೇಳುತ್ತಾರೆ. ನಾನಾಗಲೀ, ನನ್ನ ತಂದೆಯಾಗಲೀ ಅಥವಾ ಪ್ರತಿವಾದಿ 3 ಅಥವಾ 6 ಇವರು ರಾಜಶೇಖರ ಈತನಿಗೆ ಈ ಅಂಗಡಿಗಳನ್ನು ಶುರುಮಾಡಲು ಹಣಕೊಟ್ಟ ಬಗ್ಗೆ ಏನಾದರೂ ದಾಖಲೆ ಈ ದಾವೆಯಲ್ಲಿ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ, ದುಡಿದು ಆತನ ಕೈಯಲ್ಲಿ ಕೊಡುತ್ತಿದ್ದೇವು ಎಂದು ಹೇಳುತ್ತಾರೆ. ಸದರಿ ವಿಷಯವನ್ನು ನಾನು ನನ್ನ ವಾದ ಪತ್ರದಲ್ಲಿ ಮತ್ತು ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳಿ ತಿಳಿಸಿಲ್ಲ. ಈ ವಿಷಯ ತಿಳಿಸಲು ತೊಂದರೆ ಇರಲಿಲ್ಲ ಎಂದರೆ ಸರಿ. ಸಾಕ್ಷಿ ತಿಳಿಸಲು ಗೊತ್ತಾಗಲಿಲ್ಲ ಎಂದು ಹೇಳುತ್ತಾರೆ. ಈಗಲೂ ನಾನೇ ಮನೆತನ ನಡೆಸುತ್ತಿದ್ದರೂ, ನನಗೆ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಶೆಡ್ಯೂಲ್ ಬಿ ಯ ಐಟಂ ನಂಬರ್ 4 ಮನೆಯನ್ನು, ಸುಮಾರು 10 ವರ್ಷಗಳ ಹಿಂದೆ ಒಟ್ಟು ಕುಟುಂಬದಲ್ಲಿ ಇದ್ದಾಗ ನನ್ನ ತಮ್ಮ ವ್ಯಾಪಾರ ಮಾಡುತ್ತಿದ್ದಾಗ ಖರೀದಿ ಮಾಡಿದ್ದು ಇರುತ್ತದೆ. ಕ್ರಯಪತ್ರ ಆದ ದಿನಾಂಕ ನೆನಪಿಲ್ಲ. ಪರಮೇಶಪ್ಪ ಎನ್ನುವವರಿಂದ ಖರೀದಿ ಮಾಡಿದರು. ನನ್ನ ತಮ್ಮನ ಹೆಸರಿನಲ್ಲಿ ಕ್ರಯಪತ್ರ ಆಗಿರುತ್ತದೆ. ಕ್ರಯಪತ್ರ ಆಗುವ ಸಮಯದಲ್ಲಿ ನನ್ನ ತಂದೆ ಜೀವಂತ ಇದ್ದರು. ಸಾಕ್ಷಿ ನಮಗೆ ತಿಳಿಸದೇ ಕ್ರಯಪತ್ರ ಮಾಡಿಕೊಂಡಿದ್ದನು ಎಂದು ಹೇಳುತ್ತಾರೆ. ರಾಜಶೇಖರ ನಂತರ ಕ್ರಯಪತ್ರ ಮಾಡಿಕೊಂಡಿದ್ದೇನೆ ಎಂದು ಹೇಳಿದ್ದರು. ನನ್ನ ತಂದೆ ಜೀವಂತ ಇದ್ದಾಗ ಅಥವಾ ಆತ ತೀರಿಕೊಂಡ ನಂತರ ಇದು ಒಟ್ಟು ಕುಟುಂಬದ ಆಸ್ತಿ, ಎಲ್ಲರ ಹೆಸರನ್ನು ಸೇರಿಸಿ ಎಂದು ಪಂಚಾಯಿತಿಯಲ್ಲಿ ಅರ್ಜಿ ಕೊಟ್ಟಿಲ್ಲ ಸಾಕ್ಷಿ ಎಲ್ಲರೂ ಒಟ್ಟಿಗೆ ಇದ್ದ ಕಾರಣ ಕೊಟ್ಟಿಲ್ಲಎಂದು ಹೇಳುತ್ತಾರೆ. ದಿನಾಂಕಃ30-11-2009 ರಂದು ರೂ.72 ಸಾವಿರ ಕೊಟ್ಟು, ಈ ಆಸ್ತಿಯನ್ನು ರಾಜಶೇಖರ ಖರೀದಿ ಮಾಡಿದನು ಎಂದರೆ ಸರಿ. ಆತನ ಹೆಸರಿಗೆ ಕ್ರಯಪತ್ರ ಆಗಿದೆ ಎಂದರೆ ಸರಿ.

ಇಂದಿಗೂ ಈ ಆಸ್ತಿ ರಾಜಶೇಖರ ಈತನ ಹೆಸರಿಗೆ ಇದೆ. ನನ್ನ ತಮ್ಮ ತೀರಿಕೊಂಡ ನಂತರ ಈ ಆಸ್ತಿಗೆ ನಮ್ಮ ಹೆಸರನ್ನು ದಾಖಲು ಮಾಡಲು ಪಂಚಾಯಿತಿಗೆ ಅರ್ಜಿ ಕೊಟ್ಟಿಲ್ಲ. ಶೆಡ್ಯೂಲ್ ಬಿ ಯ ಐಟಂ ನಂಬರ್ 5 ಮತ್ತು 6 ಮನೆಯ ಆಸ್ತಿಗಳನ್ನು ರಾಜಶೇಖರ ಯಾವಾಗ ಮತ್ತು ಯಾರಿಂದ ಎಷ್ಟು ಮೊತ್ತಕ್ಕೆ ಖರೀದಿ ಮಾಡಿದನು ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಆತನೇ ಮನೆಯ ಎಲ್ಲಾ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದನು ಎಂದು ಹೇಳುತ್ತಾರೆ. ರಾಜಶೇಖರ ಇವನೇ ಮನೆಯ ಎಲ್ಲಾ ವ್ಯವಹಾರ ನೋಡಿಕೊಳ್ಳುತ್ತಿದ್ದನು ಎಂದು ನನ್ನ ವಾದಪತ್ರದಲ್ಲಿ ತಿಳಿಸಿಲ್ಲ.

**ಮುಂದುವರೆದ ಪಾಟೀ ಸವಾಲಿಗೆ 4 ಮತ್ತು 5 ನೇ ಪ್ರತಿವಾದಿಗಳ ಪರ ವಕೀಲರು ಸಮಯಕೇಳಿದ್ದು, ನೀಡಲಾಯಿತು.**

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹರಿಹರ.